**ಸಾಕ್ಷಿಯನ್ನು ದಿಃ 07.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಮೊದಲು ಬಾಡಿಗೆಯನ್ನು ವಾದಿಯ ತಮ್ಮ ಮುಕುಂದ ರವರಿಗೆ ಕೊಡುತ್ತಿದ್ದೆ ಎಂದರೆ 40 ವರ್ಷಗಳಿಂದ ಮುಕುಂದರವರಿಗೆ ಬಾಡಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ವಾದಿಯ ತಮ್ಮ ಮುಕುಂದನಿಗೆ ಆತ ಸಾಯುವವರೆಗೂ ಬಾಡಿಗೆ ಕೊಟ್ಟಿದ್ದೇನೆ ಎಂದರೆ ಸರಿ. ಮುಕುಂದರವರು ಮೇ 2011 ರಲ್ಲಿ ತೀರಿಕೊಂಡರು ಎಂದರೆ ನನಗೆ ನೆನಪಿಲ್ಲ. ಮುಕುಂದ ರವರು ತೀರಿದ ನಂತರ ವಾದಿಗೆ ಬಾಡಿಗೆಯನ್ನು ಪಾವತಿಸಿದ್ದೀರಿ ಎಂದರೆ ಸಾಕ್ಷಿಯು ಮುಕುಂದರವರು ಇದ್ದಾಗ ನನ್ನ ನಂತರ ಮನೆಯಲ್ಲಿ ಯಾರು ಇರುತ್ತಾರೋ ಅವರಿಗೆ ಬಾಡಿಗೆ ಕೊಡಲು ಹೇಳಿದ್ದು ಆ ಪ್ರಕಾರ ಮನೆಯಲ್ಲಿದ್ದವರಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಗೆ ಬಾಡಿಗೆ ಕೊಟ್ಟಿರುವುದಾಗಿ ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಂಗಡಿ ಬಿಡುವವರೆಗೂ ಬಾಡಿಗೆ ಕೊಟ್ಟಿದ್ದೇನೆ. ಈ ಬಗ್ಗೆ ನನ್ನಲ್ಲಿ ದಾಖಲೆ ಇಲ್ಲ. ನಾನು 2013 ರಿಂದ ವಾದಿ ಲಲಿತಮ್ಮ ರವರಿಗೆ ಬಾಡಿಗೆ ಕೊಡಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಶಾರದ ಎನ್ನುವವರು ಲಲಿತಮ್ಮ ರವರ ಮೇಲೆ ಓ.ಎಸ್. 1087/2012 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಅದರಲ್ಲಿ ನಾನು 5 ನೇ ಪ್ರತಿವಾದಿ ಎಂದರೆ ಸರಿ. ಆ ದಾವೆಯಲ್ಲಿ ಮಾಲೀಕರು ಯಾರು ಎಂದು ತೀರ್ಮಾನ ಆಗದ ಕಾರಣ ನಾನು ಬಾಡಿಗೆ ಕೊಟ್ಟಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ಶಾರದ ಭಾಗಕ್ಕಾಗಿ ದಾವೆ ಹೂಡಿದ್ದರು ಎಂದರೆ ಸರಿ. ಅವರು ಭಾಗ ಆಗುವುದಕ್ಕೂ ನಾನು ಬಾಡಿಗೆ ಕೊಡುವುದಕ್ಕೂ ಸಂಬಂಧ ಇಲ್ಲ ಎಂದರೆ ಸರಿ. ನಾನು 2013 ರವರೆಗೂ ವಾದಿ ಲಲಿತಮ್ಮರವರಿಗೆ ಬಾಡಿಗೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆಯಲ್ಲಿ ಯಾರು ಇರುತ್ತಾರೋ ಅವರಿಗೆ ಬಾಡಿಗೆ ಕೊಡುತ್ತಿದ್ದೆ ಎನ್ನುತ್ತಾರೆ. ಅವರಿಂದ ರಶೀದಿ ಪಡೆದಿಲ್ಲ. ಮುಕುಂದರವರು ತೀರಿಕೊಂಡ ನಂತರ ವಾದಿ ಲಲಿತಮ್ಮ ರವರಿಗೆ ನಾನು ತಿಂಗಳಿಗೆ ರೂ. 3000/- ಬಾಡಿಗೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ರೂ. 900/-

ಕೊಡುತ್ತಿದ್ದೆ ಎನ್ನುತ್ತಾರೆ. ನಾನು ಮುಕುಂದರವರಿದ್ದಾಗ ಎರಡು ಮಳಿಗೆ ಬಾಡಿಗೆಗೆ ಪಡೆದಿದ್ದೆ ಎಂದರೆ ಸರಿಯಲ್ಲ. ಒಂದು ಮಳಿಗೆ ಪಡೆದಿದ್ದೆ ಎನ್ನುತ್ತಾರೆ. ಮುಕುಂದರವರು ತೀರಿದ ನಂತರ ದಕ್ಷಿಣದ ಅರ್ಧ ಭಾಗವನ್ನು ವಾದಿಯವರಿಗೆ ಬಿಟ್ಟು ಕೊಟ್ಟಿದ್ದೇನೆ ಎಂದರೆ ಒತ್ತಾಯ ಮಾಡಿದ ಕಾರಣ ಬಿಟ್ಟುಕೊಟ್ಟಿದ್ದೇನೆ ಎನ್ನುತ್ತಾರೆ. ಉತ್ತರದ ಅರ್ಧ ಭಾಗಕ್ಕೆ ರೂ. 3000/- ಬಾಡಿಗೆಗೆ ಒಪ್ಪಿದ್ದು ರೂ. 30,000/- ಹಣವನ್ನು 10 ತಿಂಗಳ ಬಾಡಿಗೆಯಾಗಿ ಮುಂಗಡವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಅಡ್ವಾನ್ಸ್ ನೀಡಿಲ್ಲ. ನಾನು ಬಾಡಿಗೆ ಕೊಡುವುದನ್ನು ನಿಲ್ಲಿಸಿದ ಕಾರಣ ವಾದಿ ಹೆಚ್.ಆರ್.ಸಿ 75/2013 ಅರ್ಜಿ ಹಾಕಿದ್ದರು ಎಂದರೆ ಸರಿ. ಆಗಲು ನಾನು ಬಾಡಿಗೆ ಕೊಡುತ್ತಿರಲಿಲ್ಲ ಎಂದರೆ ಸರಿ. ನಾನು ಮಳಿಗೆ ಖಾಲಿ ಮಾಡಬೇಕು ಎಂದು ಆದೇಶ ಆಯಿತು ಎಂದರೆ ಸರಿ. ಆಗಲೂ ನಾನು ಖಾಲಿ ಮಾಡದ ಕಾರಣ ಜಾರಿ ಸಂಖ್ಯೆ 72/2021 ಅನ್ನು ಹಾಕಿ ವಾರೆಂಟ್ ಹೊರಡಿಸುವ ಸಂದರ್ಭದಲ್ಲಿ ನಾನು ಸ್ವಾಧೀನ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿ. ದಿಃ 22.04.2013 ರಂದು ನನಗೆ ಮಳಿಗೆ ಖಾಲಿ ಮಾಡಲು ಈಗ ನನಗೆ ತೋರಿಸುತ್ತಿರುವ ನೋಟೀಸ್ ನೀಡಿದ್ದಾರೆ ಎಂದರೆ ಸರಿ. ಸಾಕ್ಷಿ ನೋಡಿ ಒಪ್ಪಿದ ದಾಖಲೆಯನ್ನು ನಿಪಿ. 11 ಎಂದು ಗುರುತಿಸಲಾಯಿತು. ಹೆಚ್.ಆರ್.ಸಿ 75/2013 ಅರ್ಜಿಗೆ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಅದರಲ್ಲಿ ಲಲಿತಮ್ಮ ರವರು ದಾಖಲೆಗಳನ್ನು ಹಾಜರು ಪಡಿಸಿದ್ದರು ಎಂದರೆ ಸರಿ. ನಾನು ಬಾಡಿಗೆ ಕೊಟ್ಟ ಬಗ್ಗೆ ಸಹ ಈಗ ನಾನು ತೋರಿಸುತ್ತಿದ್ದ ಎರಡು ರಶೀದಿಗಳನ್ನು ಹಾಜರು ಪಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ರಶೀದಿಗಳು ಹಳೆಯ ರಶೀದಿಗಳು ಎಂದರೆ ಸರಿಯಲ್ಲ. ಈ ಅರ್ಜಿ ಅಲ್ಲದೇ ನನ್ನ ಮೇಲೆ ಓ.ಎಸ್. 542/2021 ರಂತೆ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಮೂರು ವರ್ಷದ ಬಾಡಿಗೆಗೆ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ವಕೀಲರ ಮುಖಾಂತರ ಹಾಜರಾಗಿದ್ದೇನೆ ಎಂದರೆ ಸರಿ. ಲಲಿತಮ್ಮರವರಿಗೆ 93 ವರ್ಷ ವಯಸ್ಸು ಎಂದರೆ ಸರಿ. ಅವರಿಗೆ ಓಡಾಡಲು ಆಗುವುದಿಲ್ಲ ಎಂದರೆ ಸರಿ. ಅವರಿಗೆ ಬಾಡಿಗೆ ಹಣ ಬಿಟ್ಟರೆ

ಬೇರೆ ವರಮಾನ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಳಿಗೆಯನ್ನು ರೂ. 10,000/- ಕ್ಕೆ ಬಾಡಿಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ.

ಮುಂದುವರೆದ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.